**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 239 (195) |
| ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು. |
| ಉತ್ತರಿಸುವ ದಿನಾಂಕ | : | 13.09.2022 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇತ್ತೀಚೆಗೆ ಬಾಲ್ಯವಿವಾಹ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ತಡೆಗೆ ಸರ್ಕಾರ ಕೈಗೊಂಡ ಕ್ರಮಗಳೇನು: | ಬಂದಿದೆ.<br><br>ಬಾಲ್ಯವಿವಾಹ ತಡೆಗೆ ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳು ಈ ಕೆಳಗಿನಂತಿವೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆ 2006 ಹಾಗೂ ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು 2014ನ್ನು ರಾಜ್ಯಾದ್ಯಂತ ಜಾರಿಗೊಳಿಸಲಾಗುತ್ತಿದೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆ-2006ನ್ನು ಬಲಪಡಿಸಲು ಕರ್ನಾಟಕ ರಾಜ್ಯವು ಕಾಯ್ದೆಗೆ ತಿದ್ದುಪಡಿಯನ್ನು ತಂದಿದ್ದು,ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಅಧಿನಿಯಮ-2016ರನ್ನು ದಿ:03.03.2018ರಿಂದ ಜಾರಿಗೆ ತಂದಿರುತ್ತದೆ.<br>• ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು 2022ನ್ನು ರಚಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆಯ ಅನುಷ್ಠಾನಕ್ಕಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಒಳಗೊಂಡಂತೆ ಪ್ರಮುಖ 10 ಇಲಾಖೆಗಳಲ್ಲಿ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸುತ್ತಿರುವ (ರಾಜ್ಯ/ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತ್ ವ್ಯಾಪ್ತಿಯ) 58,000 ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧಾಧಿಕಾರಿಗಳೆಂದು ಗುರುತಿಸಿ ಅವರ ಅಧಿಕಾರದ ವ್ಯಾಪ್ತಿಯನ್ನು ನಿಗದಿ ಪಡಿಸಿ ವಿವಿಧ ಹಂತಗಳಲ್ಲಿ ನೇಮಿಸಿ 2018ರಲ್ಲಿ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಅವರ ಪ್ರಕಾರ್ಯ ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಲಾಗಿದೆ, 10 ವಿವಿಧ ಇಲಾಖೆಗಳ ನಿರ್ದಿಷ್ಟ ಪಾತ್ರಗಳ ಬಗ್ಗೆ ಸ್ಪಷ್ಟಪಡಿಸಲಾಗಿದೆ. |
| ಆ) | ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ದಾಖಲಾದ ಬಾಲ್ಯವಿವಾಹ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ದಾಖಲಾದ ಬಾಲ್ಯವಿವಾಹ ಪ್ರಕರಣಗಳ ಸಂಖ್ಯೆ:10,352.<br>ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಇ) | ಬಾಲ್ಯ ವಿವಾಹದ ದುಷ್ಪರಿಣಾಮದ ಬಗ್ಗೆ ಜನತೆಯಲ್ಲಿ ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.**<br>• ಬಾಲ್ಯವಿವಾಹ ನಿಷೇಧದ ಬಗ್ಗೆ ರಾಜ್ಯಾದ್ಯಂತ ಆಂದೋಲನದ ರೂಪದಲ್ಲಿ "ಬಾಲ್ಯವಿವಾಹ ನಿಷೇಧ ಅಭಿಯಾನ" ಎಂಬ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ವಾರ್ತಾ ಮತ್ತು ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ "ವಿಡಿಯೋ ಆನ್ ವಿಲ್ಸ್" ವಾಹನಗಳ ಮೂಲಕ 788 ಹೋಬಳಿಗಳಲ್ಲಿ 3000 ಪ್ರದರ್ಶನಗಳನ್ನು ಮತ್ತು 7 ಬಿಬಿಎಂಪಿ ವಲಯಗಳಲ್ಲಿ 350 ಪ್ರದರ್ಶನಗಳನ್ನು ಏರ್ಪಡಿಸುವ ಮೂಲಕ ವ್ಯಾಪಕ ಪ್ರಚಾರ ನೀಡಿ ಅರಿವು ಮೂಡಿಸಲು ಕ್ರಮವಹಿಸಲಾಗಿದೆ. ಇದಲ್ಲದೆ ಮಾನವ ಸರಪಳಿ ನಿರ್ಮಾಣ, |

| | | |
|---|---|---|
| | | ಸಹಿ ಕ್ಯಾಂಪೇನ್, ಪ್ರತಿಜ್ಞಾ ಸ್ವೀಕಾರದ ಮೂಲಕ ಜಾಗೃತಿ ಮೂಡಿಸಲು ಕ್ರಮವಹಿಸಲಾಗಿದೆ.<br>ದೂರದರ್ಶನದಲ್ಲಿ [illegible] ಕಾರ್ಯಕ್ರಮಗಳು ರಾಜ್ಯದ ವಿಭಾಗಗಳಲ್ಲಿ ಯುವಜನಮೇಳ ಬಸ್ ಬ್ರ್ಯಾಂಡಿಂಗ್ ಐ.ಇ.ಸಿ ಕಾರ್ಯಕ್ರಮಗಳ ಮೂಲಕ ಬಾಲ್ಯವಿವಾಹ ತಡೆ ಕುರಿತಂತೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಬಾಲ್ಯವಿವಾಹ ನಿಷೇಧಾಧಿಕಾರಿಗಳು ಹಾಗೂ ಭಾಗೀದಾರ ಇಲಾಖೆಗಳ ಅಧಿಕಾರಿಗಳಿಗೆ ಸಹಕಾರಿಯಾಗುವಂತೆ ಬಾಲ್ಯವಿವಾಹ ನಿಷೇಧ ಕಾಯ್ದೆ ಅನುಷ್ಠಾನ ಕುರಿತಂತೆ ಕ್ರಮಬದ್ಧ ಕಾರ್ಯವಿಧಾನ (ಎಸ್.ಓ.ಪಿ) ಮಾರ್ಗಸೂಚಿಗಳನ್ನು ಮುದ್ರಿಸಲು ಕ್ರಮವಹಿಸಲಾಗಿದೆ.<br><br>**ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ.**<br><br>• ನಿರ್ದೇಶನಾಲಯದ ಸಾಮಾಜಿಕ ಜಾಲತಾಣಗಳಾದ ಫೇಸ್ ಬುಕ್, ಟ್ವಿಟರ್ ಮತ್ತು ಇನ್‌ಸ್ಟಾಗ್ರಾಂಗಳಲ್ಲಿ ಬಾಲ್ಯವಿವಾಹದ ವಿರುದ್ಧ ವಿವಿಧ ಪೋಸ್ಟರ್‌ಗಳನ್ನು ವಿನ್ಯಾಸಗೊಳಿಸಿ ಅಳವಡಿಸುವ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿದೆ.<br>• ಬಾಲ್ಯವಿವಾಹದ ವಿರುದ್ಧ 30 ಸೆಕೆಂಡ್‌ಗಳ ರೀಲ್‌ಗಳನ್ನು ಸಿದ್ಧಪಡಿಸಿ ಸಾರ್ವಜನಿಕರ ಹೆಚ್ಚಿನ ಅರಿವಿಗಾಗಿ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಗೊಳಿಸಲಾಗಿದೆ.<br>• ಬಾಲ್ಯವಿವಾಹ ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ 1098 ಸಂಪರ್ಕಿಸುವಂತೆ 2 ಲಕ್ಷಗಳ ಕಾರ್ಡ್‌ಗಳನ್ನು ಮುದ್ರಿಸಿ ಎಲ್ಲಾ ಜಿಲ್ಲೆಗಳಿಗೆ ವಿತರಿಸಲಾಗಿದೆ.<br>• ಬಾಲ್ಯವಿವಾಹ ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ 1098 ಸಂಪರ್ಕಿಸುವಂತೆ ಜಾತಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.<br>• ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ವಿವಿಧ ರೀತಿಯ ಅರಿವು ಕಾರ್ಯಕ್ರಮಗಳನ್ನು ಬಾಲ್ಯವಿವಾಹದ ವಿರುದ್ಧ ಆಯೋಜನೆ ಮಾಡಿರುತ್ತಾರೆ. |
| ಈ) | 11-18 ವರ್ಷ ಪ್ರಾಯದ ಪೂರ್ವ ಬಾಲಕಿಯರ ಸಬಲೀಕರಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಕೇಂದ್ರ ಸರ್ಕಾರದ ಪತ್ರ ದಿನಾಂಕ: 09.06.2022ರ ಪರಿಷ್ಕೃತ ಮಾರ್ಗಸೂಚಿಯಂತೆ ಪ್ರಾಯ ಪೂರ್ವ ಬಾಲಕಿಯರ ವಯೋಮಿತಿಯನ್ನು 14-18 ವರ್ಷಗಳು ಎಂದು ನಿಗದಿಪಡಿಸಿ, ಮಹತ್ವಾಕಾಂಕ್ಷೆ ಜಿಲ್ಲೆಗಳಾದ ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸದರಿ ಗುರುತಿಸಲಾದ ಪ್ರಾಯ ಪೂರ್ವ ಬಾಲಕಿಯರ ಆರೋಗ್ಯ ಮತ್ತು ಪೌಷ್ಠಿಕತೆಯನ್ನು ಉತ್ತಮಗೊಳಿಸಲು ಪೌಷ್ಠಿಕ ಆಹಾರ ಮತ್ತು ಕಬ್ಬಿಣಾಂಶದ ಮಾತ್ರೆಗಳನ್ನು ಪೋಷಣೆಯ ಪರಿಕರದಲ್ಲಿ (Nutrition Component) ನೀಡುವುದು, ಆರೋಗ್ಯ ತಪಾಸಣೆ, ಮಾಹಿತಿ(ರೆಫರಲ್) ಸೇವೆ, ಕೌಶಲ್ಯ ತರಬೇತಿ, ಪೋಷಣಾ ಮತ್ತು ಆರೋಗ್ಯ ಶಿಕ್ಷಣವನ್ನು ಪೋಷಣೇತರ ಪರಿಕರದಲ್ಲಿ(Non Nutrition Component) ಈ ಸೇವೆಗಳನ್ನು ಒದಗಿಸುವ ಗುರಿ ಹೊಂದಿದೆ. |
| ಉ) | ಕಳೆದ ಮೂರು ವರ್ಷಗಳಲ್ಲಿ ಕರೋನಾದಿಂದಾಗಿ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾದ ಮಕ್ಕಳ ಸಂಖ್ಯೆ ಎಷ್ಟು; ಸದರಿ ಮಕ್ಕಳ ಪುನರ್ವಸತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು? | ದಿನಾಂಕ:01.03.2020ರ ನಂತರ ಕೋವಿಡ್-19ರ ಕಾರಣದಿಂದ ಒಟ್ಟು 232 ಮಕ್ಕಳು ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾಗಿರುತ್ತಾರೆ.<br><br>ಸದರಿ ಮಕ್ಕಳಿಗೆ ರಾಜ್ಯ ಸರ್ಕಾರದ ಮುಖ್ಯಮಂತ್ರಿ ಬಾಲಸೇವಾ ಯೋಜನೆ ಮತ್ತು ಕೇಂದ್ರ ಸರ್ಕಾರದ PM Cares for |

| | | |
|---|---|---|
| | | Children ಯೋಜನೆಯಡಿ ಆರ್ಥಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. 2021-22 ಮತ್ತು 2022-23ನೇ ಸಾಲಿನಲ್ಲಿ ಒದಗಿಸಲಾದ ಆರ್ಥಿಕ ಸೌಲಭ್ಯದ ವಿವರ ಕೆಳಕಂಡಂತಿದೆ.<br><br>ಮುಖ್ಯಮಂತ್ರಿ ಬಾಲಸೇವಾ ಯೋಜನೆಯಡಿ 2021-22ನೇ ಸಾಲಿನಲ್ಲಿ ಪ್ರತಿ ಫಲಾನುಭವಿಗೆ ಮಾಹೆಯಾನ ರೂ.3,500/-ಗಳಂತೆ 18 ವರ್ಷದೊಳಗಿನ ಫಲಾನುಭವಿಗಳಿಗೆ ಒಟ್ಟು ರೂ.46,58,500/-ಗಳ ಅನುದಾನವನ್ನು ಬಿಡುಗಡೆ ಗೊಳಿಸಲಾಗಿದೆ ಹಾಗೂ ಎಸ್.ಎಸ್.ಎಲ್.ಸಿ ಪೂರೈಸಿದ 54 ಫಲಾನುಭವಿಗಳಿಗೆ ಲ್ಯಾಪ್‌ಟಾಪ್‌ನ್ನು ವಿತರಿಸಲಾಗಿದೆ. 2021-22ನೇ ಸಾಲಿನಲ್ಲಿ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ 06 ಮಕ್ಕಳನ್ನು ಮಕ್ಕಳ ಪಾಲನಾ ಸಂಸ್ಥೆಗಳಿಗೆ ದಾಖಲಿಸಲಾಗಿದೆ.<br><br>2022-23ನೇ ಸಾಲಿಗೆ ಸದರಿ ಯೋಜನೆಯಡಿ 18 ವರ್ಷದೊಳಗಿನ ಫಲಾನುಭವಿಗಳಿಗೆ ದಿನಾಂಕ:07.09.2022ರ ಅಂತ್ಯಕ್ಕೆ ರೂ.21,60,000/-ಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ಹಾಗೂ 2022-23ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಪೂರೈಸಿದ 40 ಫಲಾನುಭವಿಗಳಿಗೆ ಲ್ಯಾಪ್ ಟಾಪ್‌ನ್ನು ವಿತರಿಸಲು ಅನುದಾನವನ್ನು ಬಿಡುಗಡೆ ಗೊಳಿಸಲಾಗಿದೆ.<br><br>PM Cares for Children ಯೋಜನೆಯಡಿ 2021-22ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳಿಂದ PM Cares portal ನಲ್ಲಿ ಅನುಮೋದನೆಗೊಂಡ ಫಲಾನುಭವಿಗಳಿಗೆ ಯೋಜನೆಯ ಮಾರ್ಗಸೂಚಿಗಳನ್ವಯ ನಿಗದಿಪಡಿಸಿರುವ ಅನುದಾನವನ್ನು ಫಲಾನುಭವಿಗಳ ಪೋಸ್ಟ್ ಆಫೀಸ್ ಖಾತೆಗೆ ಕೇಂದ್ರ ಸರ್ಕಾರದಿಂದ ಬಿಡುಗಡೆಗೊಳಿಸಲಾಗಿದೆ ಹಾಗೂ ಪ್ರಾಯೋಜಕತ್ವ ಕಾರ್ಯಕ್ರಮದಡಿ ಪ್ರತಿ ಫಲಾನುಭವಿಗೆ ಮಾಹೆಯಾನ ರೂ.2000/-ಗಳಂತೆ PM Cares for Children ಪೋರ್ಟಲ್ ನಲ್ಲಿಅನುಮೋದನೆಗೊಂಡ ದಿನಾಂಕದಿಂದ ಅನ್ವಯಿಸುವಂತೆ 18 ವರ್ಷದೊಳಗಿನ ಫಲಾನುಭವಿಗಳಿಗೆ ರೂ.24,44,000/-ಗಳನ್ನು ಬಿಡುಗಡೆಗೊಳಿಸಲಾಗಿದೆ ಹಾಗೂ 2021-22ನೇ ಸಾಲಿನಲ್ಲಿ 20 ಮಕ್ಕಳಿಗೆ ಕೇಂದ್ರೀಯ ವಿದ್ಯಾಲಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ದಾಖಲಿಸಲಾಗಿದೆ. ಜಿಲ್ಲಾಧಿಕಾರಿಗಳಿಂದ PM Cares portal ನಲ್ಲಿ ಅನುಮೋದನೆಗೊಂಡ ಫಲಾನುಭವಿಗಳಿಗೆ ರೂ.5.00 ಲಕ್ಷಗಳವರೆಗೆ ವೈದ್ಯಕೀಯ ವೆಚ್ಚ ಭರಿಸುವ Pradhana Mantri Jan Arogya Yojane (PMJAY)ಯ Health Cardನ್ನು ವಿತರಿಸಲಾಗಿದೆ.<br><br>2022-23ನೇ ಸಾಲಿಗೆ PM Cares for Children ಯೋಜನೆಯ ಫಲಾನುಭವಿಗಳಿಗೆ ಮಾಹೆಯಾನ ರೂ.4000/-ಗಳಂತೆ ಪ್ರಾಯೋಜಕತ್ವ ಕಾರ್ಯಕ್ರಮದಡಿ ಒಟ್ಟು ರೂ.88,60,000/-ಗಳ ಅನುದಾನವನ್ನು ಬಿಡುಗಡೆ ಗೊಳಿಸಲಾಗಿದೆ. |

**ಸಂಖ್ಯೆ:ಮಮಇ 161 ಮಮಅ 2022**

Halappa

**(ಆಚಾರ ಹಾಲಪ್ಪ ಬಸಪ್ಪ)**
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು.

## ಅನುಬಂಧ

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 239 (195) ಕ್ಕೆ ಉತ್ತರ

ರಾಜ್ಯದಲ್ಲಿ ಕಳೆದ ಐದು ವರ್ಷಗಳಿಂದ ದಾಖಲಾದ ಬಾಲ್ಯವಿವಾಹ ಪ್ರಕರಣಗಳ ಸಂಖ್ಯೆ (ಜಿಲ್ಲಾವಾರು)

| ಕ್ರ.ಸಂ | ಜಿಲ್ಲೆಯ ಹೆಸರು | 2017-18 | | | | 2018-19 | | | | 2019-20 | | | | 2020-21 | | | | 2021-22 | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಎಫ್ ಐ ಆರ್ ಸಂಖ್ಯೆ |
| *1* | *2* | *3* | *4* | *5* | *6* | *7* | *8* | *9* | *10* | *11* | *12* | *13* | *14* | *15* | *16* | *17* | *18* | *19* | *20* | *21* | *22* |
| 1 | ಬಾಗಲಕೋಟೆ | 25 | 25 | 0 | 0 | 43 | 36 | 7 | 0 | 65 | 60 | 5 | 0 | 113 | 95 | 18 | 10 | 177 | 138 | 39 | 39 |
| 2 | ಬೆಂಗಳೂರು (ಗ್ರಾ) | 66 | 45 | 21 | 19 | 8 | 7 | 1 | 1 | 5 | 5 | 0 | 0 | 74 | 66 | 8 | 8 | 59 | 51 | 8 | 8 |
| 3 | ಬೆಂಗಳೂರು (ನ) | 115 | 104 | 11 | 8 | 27 | 22 | 5 | 2 | 20 | 17 | 3 | 2 | 43 | 34 | 8 | 8 | 51 | 38 | 13 | 12 |
| 4 | ಬೆಳಗಾವಿ | 52 | 39 | 13 | 2 | 150 | 138 | 12 | 0 | 144 | 132 | 12 | 6 | 187 | 169 | 18 | 13 | 140 | 124 | 16 | 16 |
| 5 | ಬಳ್ಳಾರಿ | 72 | 64 | 8 | 8 | 107 | 105 | 2 | 2 | 68 | 65 | 3 | 3 | 261 | 249 | 12 | 12 | 207 | 190 | 17 | 17 |
| 6 | ಬೀದರ್ | 136 | 132 | 4 | 0 | 48 | 43 | 5 | 1 | 86 | 86 | 0 | 0 | 72 | 69 | 3 | 1 | 42 | 42 | 0 | 0 |
| 7 | ವಿಜಯಪುರ | 27 | 27 | 0 | 0 | 68 | 67 | 1 | 1 | 58 | 58 | 0 | 0 | 111 | 110 | 1 | 0 | 82 | 55 | 27 | 27 |
| 8 | ಚಾಮರಾಜನಗರ | 32 | 32 | 0 | 0 | 21 | 21 | 0 | 0 | 25 | 22 | 3 | 3 | 87 | 86 | 1 | 1 | 72 | 67 | 5 | 5 |
| 9 | ಚಿಕ್ಕಬಳ್ಳಾಪುರ | 13 | 11 | 2 | 1 | 56 | 49 | 7 | 4 | 113 | 104 | 9 | 9 | 140 | 128 | 13 | 13 | 136 | 109 | 27 | 27 |
| 10 | ಚಿಕ್ಕಮಗಳೂರು | 33 | 32 | 1 | 1 | 24 | 22 | 2 | 2 | 42 | 37 | 5 | 5 | 109 | 94 | 15 | 11 | 104 | 87 | 17 | 17 |
| 11 | ಚಿತ್ರದುರ್ಗ | 72 | 63 | 9 | 4 | 57 | 54 | 3 | 0 | 57 | 55 | 2 | 2 | 132 | 128 | 4 | 4 | 137 | 128 | 9 | 8 |
| 12 | ದಕ್ಷಿಣ ಕನ್ನಡ | 7 | 6 | 1 | 1 | 11 | 9 | 2 | 0 | 15 | 11 | 4 | 4 | 21 | 20 | 1 | 1 | 12 | 11 | 1 | 1 |
| 13 | ದಾವಣಗೆರೆ | 15 | 14 | 1 | 1 | 72 | 70 | 2 | 1 | 60 | 59 | 1 | 1 | 79 | 72 | 7 | 7 | 73 | 67 | 6 | 6 |
| 14 | ಧಾರವಾಡ | 48 | 43 | 5 | 0 | 9 | 9 | 0 | 0 | 13 | 11 | 2 | 1 | 11 | 11 | 0 | 0 | 32 | 22 | 10 | 10 |
| 15 | ಗದಗ | 91 | 85 | 6 | 0 | 22 | 22 | 0 | 0 | 32 | 31 | 1 | 1 | 60 | 57 | 3 | 3 | 48 | 46 | 2 | 2 |
| 16 | ಕಲಬುರ್ಗಿ | 75 | 70 | 5 | 3 | 125 | 118 | 7 | 0 | 120 | 110 | 10 | 10 | 134 | 130 | 4 | 1 | 171 | 165 | 6 | 3 |
| 17 | ಹಾಸನ | 41 | 37 | 4 | 3 | 40 | 38 | 2 | 0 | 30 | 30 | 0 | 0 | 160 | 121 | 39 | 29 | 106 | 67 | 39 | 31 |
| 18 | ಹಾವೇರಿ | 154 | 150 | 4 | 6 | 24 | 23 | 1 | 0 | 31 | 31 | 0 | 0 | 52 | 52 | 0 | 0 | 71 | 71 | 0 | 0 |
| 19 | ಕೊಡಗು | 55 | 55 | 0 | 0 | 10 | 8 | 2 | 0 | 20 | 19 | 1 | 1 | 10 | 8 | 2 | 1 | 10 | 7 | 3 | 3 |
| 20 | ಕೋಲಾರ | 19 | 19 | 0 | 0 | 17 | 17 | 0 | 0 | 38 | 37 | 1 | 1 | 94 | 93 | 1 | 2 | 74 | 68 | 6 | 6 |
| 21 | ಕೊಪ್ಪಳ | 4 | 4 | 0 | 0 | 98 | 92 | 6 | 6 | 275 | 270 | 5 | 3 | 119 | 111 | 8 | 4 | 67 | 67 | 0 | 0 |
| 22 | ಮಂಡ್ಯ | 24 | 24 | 0 | 0 | 47 | 29 | 18 | 11 | 58 | 30 | 28 | 26 | 76 | 42 | 34 | 28 | 142 | 66 | 76 | 70 |
| 23 | ಮೈಸೂರು | 22 | 21 | 1 | 0 | 73 | 69 | 4 | 5 | 91 | 84 | 7 | 7 | 277 | 246 | 31 | 31 | 238 | 205 | 33 | 33 |
| 24 | ರಾಯಚೂರು | 10 | 7 | 3 | 3 | 31 | 30 | 1 | 0 | 41 | 39 | 2 | 2 | 95 | 77 | 18 | 17 | 147 | 135 | 12 | 4 |
| 25 | ರಾಮನಗರ | 24 | 24 | 0 | 0 | 37 | 30 | 7 | 2 | 90 | 59 | 31 | 18 | 129 | 109 | 20 | 7 | 92 | 81 | 11 | 9 |
| 26 | ಶಿವಮೊಗ್ಗ | 7 | 7 | 0 | 0 | 55 | 42 | 13 | 3 | 65 | 48 | 17 | 17 | 125 | 107 | 18 | 18 | 94 | 76 | 18 | 18 |
| 27 | ತುಮಕೂರು | 46 | 45 | 1 | 1 | 50 | 45 | 5 | 5 | 55 | 51 | 4 | 4 | 130 | 123 | 7 | 7 | 111 | 100 | 11 | 11 |
| 28 | ಉಡುಪಿ | 26 | 24 | 2 | 0 | 2 | 1 | 1 | 1 | 1 | 1 | 0 | 0 | 1 | 1 | 0 | 0 | 0 | 0 | 0 | 0 |
| 29 | ಉತ್ತರ ಕನ್ನಡ | 38 | 38 | 0 | 0 | 9 | 7 | 2 | 1 | 12 | 12 | 0 | 0 | 21 | 20 | 1 | 1 | 16 | 15 | 1 | 1 |
| 30 | ಯಾದಗಿರಿ | 4 | 4 | 0 | 0 | 53 | 52 | 1 | 0 | 49 | 49 | 0 | 0 | 84 | 83 | 1 | 1 | 108 | 103 | 5 | 5 |
| **Total** | | **1353** | **1251** | **102** | **61** | **1394** | **1275** | **119** | **48** | **1779** | **1623** | **156** | **130** | **3007** | **2711** | **296** | **239** | **2819** | **2401** | **418** | **389** |